ಶ್ರೀ ಪಿ. ಸಿ. ವಂಗಿನಿಸ್ವಾಮಯ್ಯ.—ಲೈಸನ್ಸ್‌ಗಾಗಿ ನಿಗದಿ ಮಾಡಿರುವ ೧೫ ಸಾವಿರ ರೂಪಾಯಿಗಳನ್ನು ಫೀಸ್ ರೂಪದಲ್ಲಿ ಎಲ್ಲರೂ ಕೊಡಬೇಕಾಗುತ್ತದೆ. ಆದರೆ ಅದರಲ್ಲಿ ಹರಿಜನರಿಗೆ ನಾಲ್ಕನೇ ಒಂದು ಭಾಗದಷ್ಟು ಮೊತ್ತವನ್ನು ಮಾತ್ರ ಕಟ್ಟಬೇಕೆಂದು ಮಾಡಿದರೆ ಅವರಿಗೆ ಪ್ರೋತ್ಸಾಹವನ್ನು ಕೊಟ್ಟಂತಾಗುತ್ತದೆ. ಹಾಗೆ ಏನಾದರೂ ಮಾಡುವ ಯೋಚನೆ ಸರಕಾರಕ್ಕೆ ಇದೆಯೇ ?

ಅಧ್ಯಕ್ಷರು.—ಮಾನ್ಯ ಮಂತ್ರಿಗಳವರು, ಸದಸ್ಯರು ಮಾತನಾಡುತ್ತಿರುವುದನ್ನು ಗಮನಿಸುತ್ತಿರಬೇಕು.

ಶ್ರೀ ಪಿ. ಸಿ. ವಂಗಿನಿಸ್ವಾಮಯ್ಯ.—ನಿಗದಿತ ಶುಲ್ಕದಲ್ಲಿ ಹರಿಜನರಿಗೆ ಅದರ ನಾಲ್ಕನೇ ಒಂದು ಭಾಗವನ್ನು ಮಾತ್ರ ವಿಧಿಸಲು ಒಂದು ಯೋಜನೆಯನ್ನು ರೂಪಿಸಬೇಕು. ಕಡ್ಡಾಯವಾಗಿ ಹರಿಜನರ ಕೋಟಾ ಬಗ್ಗೆ ಮತ್ತು ನಾನು ಶುಲ್ಕದ ವಿಚಾರದಲ್ಲಿ ಕೊಟ್ಟ ಸಲಹೆಯನ್ನು ಮುಂದಿನ ಸಾರಿಯಾದರೂ ಪಾಲಿಸುತ್ತಾರೆಂದು ನಾನು ನಂಬಿದ್ದೇನೆ.

ಶ್ರೀ ರವೀಂಶ್ ಸಿ. ಜಿಗಜಿಣಗಿ.—ಮಾನ್ಯ ಸದಸ್ಯರ ಸಲಹೆಗಳನ್ನು ಗಮನದಲ್ಲಿಟ್ಟು ಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿದಂಥ ಪ್ರಶ್ನೆಗಳಿಗೆ ನಾನು ನೇರವಾಗಿ ಆಗಲೇ ಉತ್ತರ ಹೇಳಿದ್ದೇನೆ. ಮಾನ್ಯ ಸದಸ್ಯರು ೧೮ ಪರ್ಸೆಂಟ್ ಕೋಟಾದರಲ್ಲಿ ಹರಿಜನ ಮತ್ತು ಗಿರಿಜನರಿಗೆ ಕೊಡುವ ವ್ಯವಸ್ಥೆಯಂಮ್ನು ಮಾಡಬೇಕೆಂದು ಕೇಳಿದ್ದಾರೆ. ಅದನ್ನು ನಾನು ನಮ್ಮ ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ಸಾಧ್ಯವಾದರೆ ಮಾಡಿಕೊಡುತ್ತೇನೆ ಎಂದೂ ಸಹ ಹೇಳಿದ್ದೇನೆ. ಮಾನ್ಯ ಸದಸ್ಯರು ಹೇಳಿದ ಹಾಗೆ ನಾನೇನು ಆ ವರ್ಗದ ಬಗ್ಗೆ ನಿರ್ಲಕ್ಷ್ಯ ಮಾಡುತ್ತಿಲ್ಲ. ಅವರು ನನ್ನ ಮೇಲೆ ಆ ರೀತಿಯ ಆರೋಪ ಮಾಡುವುದು ಸರಿಯಲ್ಲ. ನಾನು ಈ ವಿಚಾರವನ್ನು ಕೂಲಂಕಷವಾಗಿ ವಿಚಾರ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಪ್ರಶ್ನೆ ಸಂಖ್ಯೆ ೫೯ (ತಿರಿ೦)

(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು) ಅಧ್ಯಕ್ಷರು.—ಪ್ರಶ್ನೆ ಸಂಖ್ಯೆ ೬೦ (೧೪೨) ಮಾನ್ಯ ಸದಸ್ಯರ ಪ್ರಶ್ನೆಯನ್ನು ಮುಂದೂಡಲಾಯಿತು.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನಲ್ಲಿ ಅನಧಿಕೃತ ಕಟ್ಟಡಗಳ ನಿರ್ಮಾಣ

೩೧೪. ಶ್ರೀ ಎನ್. ಎಂ.ಅಡ್ಯಂತಾಯ, (ಸುರತ್‌ಕಲ್).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನಲ್ಲಿ ಸರಕಾರದ ಜಮೀನಿನಲ್ಲಿ ಅಕ್ರಮವಾಗಿ ವಾಸ ಮಾಡಿದ ಜನರಿಗೆ ಅವರು ವಾಸ ಮಾಡಿದ ನಿವೇಶನಗಳನ್ನು ಸಕ್ರಮಗೊಳಿಸಲು ಎಷ್ಟು ಜನರಿಗೆ ಕರ್ನಾಟಕ ಭೂ ಕಂದಾಯ ಶಾಸನದ ೫೪ (ಸಿ)ನೇ ಕಲಮಿನ ಪ್ರಕಾರ ದಂಡನೆ ಹಣ ತುಂಬಲು ಸೂಚನೆ ನೀಡಲಾಗಿದೆ ?

ಆ) ಹಾಗಿದ್ದಲ್ಲಿ ಬಡಪರಾದ ಈ ಜನರಿಂದ ದಂಡನೆ ಹಣವನ್ನು ವಸೂಲಿ ಮಾಡದೇ ಉಚಿತವಾಗಿ ನಿವೇಶನಗಳನ್ನು ನೀಡುವ ಬಗ್ಗೆ ಸರಕಾರದವರ ನಿಲುವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಸಚಿವರು).—

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನಲ್ಲಿ ಸರಕಾರ ಜಮೀನಿನಲ್ಲಿ ೧೦೬೯ ಮಂದಿ ಅಕ್ರಮವಾಗಿ ನಿವೇಶನಗಳನ್ನು ಹೊಂದಿದ್ದು ಅವರುಗಳಿಗೆ ಪ್ರತಿವರ್ಷ ದಂಡನೆ ವಿಧಿಸಲಾಗಿರುತ್ತದೆ.

ಆ) ಇದರ ಬಗ್ಗೆ ಸೂಕ್ತವಾದ ಕ್ರಮ ಕೈಗೊಳ್ಳಲು ಸರಕಾರ ಪರಿಶೀಲಿಸುತ್ತಿದೆ.

(ಶ್ರೀ ಎಸ್.ಎಂ. ಅಡ್ಯಂತಾಯರವರ ಪರವಾಗಿ ಮಾನ್ಯ ಸದಸ್ಯರಾದ ಶ್ರೀ ಬಿ. ಎ. ಉಮರಬ್ಬರವರು ಪ್ರಶ್ನೆಯನ್ನು ಕೇಳಿದರು)

ಶ್ರೀ ಬಿ. ಎ. ಉಮರಬ್ಬ.—ಸ್ವಾಮಿ ಬಡವರೇ ಹೆಚ್ಚಾಗಿ ಆಕ್ರಮ ಭೂಮಿಯಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸದ ಮಾಡುತ್ತಿದ್ದಾರೆ. ಅಂತಹವರಿಗೆ ದಂಡವನ್ನು ವಿಧಿಸುತ್ತಿದ್ದೇವೆಂದು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದೀರಿ. ಯಾವ ಪ್ರಮಾಣದಲ್ಲಿ ಎಷ್ಟು ದಂಡವನ್ನು ವಿಧಿಸುತ್ತೀರಿ ಎಂಬುದನ್ನು ದಯಮಾಡಿ ತಿಳಿಸುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ಬಗ್ಗೆ ಈಗ ನನ್ನಲ್ಲಿ ವಿವರಗಳು ಇಲ್ಲ. ಮಾನ್ಯ ಸದಸ್ಯರಿಗೆ ಬೇಕಾದರೆ ನಾನು ಒದಗಿಸಿಕೊಡುತ್ತೇನೆ. ನಾನು ಮೊದಲೇ ಹೇಳಿದ ಹಾಗೆ ನಾರ್ಮಲ್ ರೇಟ್‌ನಲ್ಲಿ ದಂಡವನ್ನು ವಿಧಿಸುತ್ತೇವೆ.

ಶ್ರೀ ಬಿ. ಎ. ಉಮರಬ್ಬ.—ಮಾನ್ಯ ಅಧ್ಯಕ್ಷರೇ, ಅನೇಕ ಕಡೆಗಳಲ್ಲಿ ಒತ್ತುವರಿ ಮಾಡಿಕೊಂಡು ಜಿ ಸೆನ್ಸ್‌ಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಈ ಜಾಗವನ್ನು ಸಕ್ರಮಗೊಳಿಸಿಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಹಿಂದೆಯೂ ಸಹ ಹೇಳಿದ್ದರು. ಈ ರೀತಿ ಮನೆಗಳನ್ನು ಕಟ್ಟಿಕೊಂಡಿರುವವರು ಸುಮಾರು ಒಂದು ಸಾವಿರ ಜನ ಇರಬಹುದು. ಇವರೆಲ್ಲರೂ ಸಹ ಬಡವರೇ ಇವರಿಗೆ ಸರ್ಕಾರದವರು ದಂಡವನ್ನು ವಿಧಿಸಿದರೆ ಆ ದಂಡವನ್ನೂ ಸಹ ಅವರು ಕೊಡುವ ಸ್ಥಿತಿಯಲ್ಲಿ ಇರುವುದಿಲ್ಲ. ಆದ್ದರಿಂದ ಅವರಿಗೆ ದಂಡವಿಲ್ಲದೆ ಆ ಜಾಗವನ್ನು ಸಕ್ರಮಗೊಳಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿ ಯಾರಾದರು ಮನೆಗಳನ್ನು ಆಕ್ರಮ ಜಾಗಗಳಲ್ಲಿ ಕಟ್ಟಿಕೊಂಡಿದ್ದಾರೋ ಆ ಜಾಗಗಳನ್ನು ಸಕ್ರಮಗೊಳಿಸಿಕೊಡಬೇಕೆಂದು ಹೇಳಿದ್ದೇವೆ. ಬೇಕಾದರೆ ದಂಡವನ್ನು ವಿಧಿಸುವುದರಲ್ಲಿ ಪುನರ್ ಪರಿಶೀಲನೆ ಮಾಡೋಣ,ಬಡವರಿಗೆ ಒಂದು ನಾಮಿನಲ್ ರೇಟ್‌ನಲ್ಲಿ ಮಾತ್ರ ದಂಡವನ್ನು ವಿಧಿಸುತ್ತಿದ್ದೇವೆ. ಇದರಿಂದ ಅವರ ಜಾಗ ಲೀಗಲ್ ಆಗಿ ಟೈಟಲ್ ಕೊಟ್ಟ ಹಾಗೆ ಆಗುತ್ತದೆ.

ಶ್ರೀ ಬಿ. ಎ. ಉಮರಬ್ಬ.—ಮಾನ್ಯ ಅಧ್ಯಕ್ಷರೇ, ಬಡವರ ಮೇಲೆ ವಿಧಿಸುವಂತಹ ಕಡಿಮೆ ದಂಡದಲ್ಲಿ ಸರ್ಕಾರಕ್ಕೆ ಎಷ್ಟು ಆದಾಯ ಬರುತ್ತಿದೆ ? ಬಡವರು ಕೊಡುವಂತಹ ೧೦-೨೦ ರೂಪಾಯಿ ಗಳಲ್ಲಿ ಸರ್ಕಾರದ ಬೊಕ್ಕಸವೇನು ತುಂಬುವುದಿಲ್ಲ. ಪುಕ್ಕಟೆಯಾಗಿ ಅವರ ಜಾಗವನ್ನು ಸಕ್ರಮಗೊಳಿಸಿ ಕೊಡುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಮೊದಲೇ ಹೇಳಿದ ಹಾಗೆ ನಾಮಿನಲ್ ರೇಟ್‌ನಲ್ಲಿ ಮಾತ್ರ ದಂಡವಿಧಿಸುತ್ತಿದ್ದೇವೆ. ಇದರಿಂದ ಅವರಿಗೆ ಅಧಿಕಾರ ಸಿಗುತ್ತದೆ. ಲೀಗಲ್ ಟೈಟಲ್ ಸಿಗುತ್ತದೆ. ಮಾನ್ಯ ಸದಸ್ಯರು ಹೇಳಿದ್ದನ್ನು ಸಹ ಆಲೋಚನೆ ಮಾಡೋಣ.

ಶ್ರೀ ಆರ್. ವೆಂಕಟರಾವಮ್ಮಯ್ಯ.—ಸ್ವಾಮಿ ನಮ್ಮ ಜಿಲ್ಲೆಯಲ್ಲಿಯೂ ಕೂಡ ಆ ರೀತಿಯ ಮನೆ ಗಳನ್ನು ಕಟ್ಟಿಕೊಂಡಿದ್ದಾರೆ.

ಅಧ್ಯಕ್ಷರು.—ಮಾನ್ಯ ವೆಂಕಟರಾವಮ್ಮಯ್ಯನವರೇ ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಆರ್ ವೆಂಕಟರಾಮಯ್ಯ.—ಅದಕ್ಕೆ ತಾವು ಒಂದು ಟೈಮ್ ಲಿಮಿಟ್ ಮಾಡಿ, ಆದಷ್ಟು ಬೇಗ ಎಲ್ಲಾ ಕಡೆಗಳಲ್ಲಿ ಸಕ್ರಮಗೊಳಿಸಿ. ರೆವಿನ್ಯೂ ಇನ್ಸ್‌ಪೆಕ್ಟರ್ಸ್ ಮತ್ತು ಗ್ರಾಮಲೆಕ್ಕಿಗರು ಪ್ರತಿ ಯೊಂದು ಸಾರಿ ಸ್ಥಳಕ್ಕೆ ಹೋಗಿ ಲಂಚ ತೆಗೆದುಕೊಂಡು ಬರುತ್ತಾರೆ ಅದಕ್ಕೆ ಒಂದು ಟೈಮ್ ಫಿಕ್ಸ್ ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆದಷ್ಟು ಬೇಗ ಮಾಡುತ್ತೇನೆ.

ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳು

೩೯೬. ಶ್ರೀಮಾನ್ ಜಿ. ರಾಜಂಗೌಡ, (ಹನೂರು).—ಮಾನ್ಯ ಸಹಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಎಷ್ಟು ಸಹಕಾರ ಸಕ್ಕರೆ ಕಾರ್ಖಾನೆಗಳಿವೆ ?

ಆ) ಇವುಗಳಲ್ಲಿ ಎಷ್ಟು ಕಾರ್ಖಾನೆಗಳು ಲಾಭದಾಯಕವಾಗಿ ನಡೆಯುತ್ತಿವೆ ?

ಇ) ನಷ್ಟವನ್ನು ಅನುಭವಿಸುತ್ತಿರುವ ಕಾರ್ಖಾನೆಗಳನ್ನು ಸುಧಾರಿಸಲು ಸರ್ಕಾರದವರು ಕೈ ಗೊಂಡ ಕ್ರಮವೇನು ?